ಓ ಎಸ್ ನಂಃ 88/2014 (ಪಿ ಡಬ್ಲ್ಯು 1)

ದಿನಾಂಕಃ 21-10-2016

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಆರ್ ವಿ ಜೆ ವಕೀಲರಿಂದಃ

ಸರ್ವೆ ನಂ ಃ 161 , 162 ಇವುಗಳು ಮೊದಲಿಗೆ ಯಲ್ಲಪ್ಪಾ ಮತ್ತು ದತ್ತಾತ್ರೆಯ ಇವರ ೆ ಹೆಸರಿನಲ್ಲಿ ಇದ್ದವು. ಸದರಿ ಜಮೀನಿನಲ್ಲಿ ಪೋಟ್ಟ ಹಿಸ್ಸಾಗಳು ಆಹಿರುವದಿಲ್ಲ. ಸದರಿ ಜಮೀನುಗಳಲ್ಲಿ ಪೋರ್ಟ ಹಿಸ್ಸಾ ಗಳಾಗಿವೆ ಎಂಬುದಾಗಿ ವಾದ ಪತ್ರದಲ್ಲಿ ಬರೆಸಿರುವದಿಲ್ಲ. ಸದರಿ ಜಮೀನುಗಳು ನಮ್ಮ ಮನೆತದ ಪಿತ್ರಾರ್ಜಿತ ಜಮೀನುಗಳಾಗಿರುವದಿಲ್ಲ ಅಂತಾ ಅನ್ನುವುದು ಸುಳ್ಳು. ಸದರಿ ಜಮೀನುಗಳು ಮೊದಲಿಗೆ ಒಬ್ಬ ಲಕ್ಕ್ಮ ಬಾಬಾಜಿ ಪಾಟೀಲ ಇತನ ಮಾಲ್ಕಿ ಆಸ್ತಿಗಳಾಗಿವೆ ಎಂಬುದು ನನಗೆ ಗೊತ್ತಿರುವದಿಲ್ಲ. ಸದರಿ ಜಮೀನುಗಳ ಕುರಿತು ರೈತಾಪಿ ಹಕ್ಕು ಪಡೆಯಲು ನಮ್ಮ ತಂದೆ ಭೂ ನ್ಯಾಯಾ ಮಂಡಳಿ ಅರ್ಜಿ ಸಲ್ಲಿಸಿದ್ದನು ಹೇಗೆ ಅಂತಾ ನನಗೆ ಗೊತಿತರುವದಿಲ್ಲ. ಸದರಿ ಜಮೀನು ಹೇಗೆ ನಮಗೆ ಪ್ರಾಪ್ತಿಯಯಿತು ಅಂತಾ ನನಗೆ ಗೊತ್ತಿರುವ ದಿಲ್ಲ. ಸದರಿ ಜಮೀನುಗಳನ್ನು 1 ನೇ ರತಿವಾದಿಯ ತಂದೆ ತನ್ನ ವೈಯಕ್ತಿಕ ರೈತನಾತೆಯಿಂದ ಸಾಗುವಳಿ ಮಾಡುತ್ತಿದದ್ನು ಅಂತಾ ಅನ್ನುವುದು ಸುಳ್ಳು. ಆತನು ಪಾರ್ಮ ನಂ ಃ 7 ತುಂಬಿದ್ದರಿಂದ ಆತನ ಹೆಸರಿಗೆ ಲಭೂ ನ್ಯಾಯ ಮಂಡಳಿ ಸದರಿ ಜಮೀನುಗಳ ರೃತಾಪಿಪ ಹಕ್ಕು ಮಂಜೂರಿ ಮಾಡಿತ್ತು ಅಂತಾ ಅನ್ನುವುದು ನನಗೆ ಗೊತ್ತಿರುವದಿಲ್ಲ. ಸದರಿ ರೈತಾಪಿ ಜಮೀನಿನ ಪ್ರಿಮಿಯಂ ಹಣ ದತ್ತಾತ್ರೆಯ ಇತನೇ ಭರಿಸಿದ್ದಾನೆ ಅಂತಾ ಅಂದರೆ ಇಬ್ಬರು ತುಂಬಿದ್ದಾಡೆ. ಇಬ್ಬರು ತುಂಬಿದ ಬಗ್ಗೆ ದಾಖಲೆಗಳು ನನ್ನ ಬಳಿ ಇರುವದಿಲ್ಲ. ಭೂ ನ್ಯಾಯ ಮಂಡಳಿ ಆದೇಶದ ಮೇರೆಗೆ ನಮ್ಮ ತಂದೆಯಾಗಲೀ ಅಥವಾ ನಾನಗಾಲೀ ನಮ್ಮ ಹೆಸರು ದಾಖಲಿಸಲು ವರದಿ ಕೊಟ್ಟರುವದಿಲ್ಲ. ದತ್ತು ಗಾವಡೆ ಅಂದಾಜು 5 – 6 ವರ್ಷ ಹಿಂದೆ ತೀರಿಕೊಂಡಿರುತ್ತಾನೆ. ಆತನು ತೀರಿಕೊಂಡ ನಂತರ ಸದರಿ ಜಮೀನುಗಳು ನಮ್ಮ ಹೆಸರು ದಾಖಲಿಸಲು ಪ್ರಯತ್ನ ಪಟ್ಟರುವದಿಲ್ಲ. ಸದರಿ ಜಮೀನುಗಳು ಮೊದಲಿಗೆ ಪ್ರತಿವಾದಿ 1 ಇತನ ತಂದೆಯದು ಮಾತ್ರ ಕಬ್ಜಾ ಮತ್ತು ವಹಿವಾಟ ಇತ್ತು ಅಂತಾ ಅನ್ನುವುದು ಸುಳ್ಳು. ಆತನು ತೀರಿಕೊಂಡ ನಂತರ ಸದರಿ ಜಮೀನುಗಳಿಗೆ ತನ್ನ ಹೆಸರು ದಾಖಲಿಸಲು 1 ನೇ ಪ್ರತಿವಾದಿ ವರದಿ ಕೊಟ್ಟಿದ್ದನು ಅಂತಾ ಅನ್ನುವುದು ನಿಜ. ಆ ಪ್ರಕಾರ ಆತನ ಹೆಸರು ದಾಹಲಾಯಿತು ಅಂತಾ ಅಂದರೆ ಅದಕ್ಕೆ ನಾನು ತಕರಾರು ಕೊಟ್ಟಿದ್ದೇನು. ನನ್ನ ತಕರಾರು ವಜಾ ಮಾಡಿ 1 ನೇ ಪ್ರತಿವಾದಿ ಹೆಸರು ದಾಖಲಿಸಿದರು ಅಂತಾ ಅನ್ನುವುದು ಸುಳ್ಳು.

ನನ್ನ ತಂದೆ 20 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ನಮ್ಮ ತಂದೆ ಸಾಯುವಾಗ ಸರ್ವೆ ನಂ : 161 ಮತ್ತು 162 ಹೊರತುಪಡಿಸಿ ಉಳಿದೆಲ್ಲ ದಾವಾ ಜಮೀನುಗಳಿಗೆ ಆತನ ಹೆಸರು ದಾಖಲೆಯಲ್ಲಿತ್ತು. ನಮ್ಮ ತಂದೆ ಸಾಯುವಾಗ ಆತನ ಕಬ್ಜೆಯಲ್ಲಿ ಯಾವ ಯಾವ ಜಮೀನುಗಳಿದ್ದವು ಆ ಜಮೀನುಗಳಿಗೆ ಮಾತ್ರ ನಾನು ವಾರಸನಾತೆಯಿಂದ ನನ್ನ ಹೆಸರು ಹಾಕಿಸಿಕೊಂಡಿದ್ದೇನೆ ಅಂತಾ ಅನ್ನುವುದು ನಿಜ. ನಮ್ಮ ಮನೆತನಕ್ಕೆ ಒಟ್ಟು ವಿಪಿಸಿ ನಂ : 66 , 66 ಎ ಮತ್ತು 182 , 330 ಈ ರೀತಿ 4 ಮನೆಗಳು ಇವೆ ಖುಲ್ಲಾ ಜಾಗೆ ಇರುವದಿಲ್ಲ. ವಿಪಿಸಿ ನಂ : 182 ನಂಬರಿನ ಮನೆ ಇರುವದಿಲ್ಲ ಅದು 182/4 ಮತ್ತು 182/5 ಎಂಬುದಾಗಿ ಇವೆ ಅನ್ನುವದು ನಿಜ. ಈ ಎರಡು ಆಸ್ತಿಗಳು ಈ ದಾವೆಯಲ್ಲಿ ಸೇರಿಸಿರುವದಿಲ್ಲ ಅಂತಾ ಅನ್ನುವುದು ಸುಳ್ಳು. ವಿಪಿಸಿ ನಂ : 182/4 ಮತ್ತು 182/5 ರ ಪಂಚಾಯಿತ ಉತಾರೆ ನಾನು ನೋಡಿದ್ದೆನೆ. ವಿಪಿಸಿನಂ : 182 /4 ಮೊದಲಿಗೆ ನನ್ನ ತಂದೆ ಯಲ್ಲಪ್ಪನ ಹೆಸರಿನಲ್ಲಿತ್ತು ಈಗ ಅದು ನನ್ನ ಹೆಸರಿನಲ್ಲಿ ದಾಖಲ ಇದೆ. ನಾನು ವರದಿ ನೀಡಿದಕ್ಕಾಗಿ ನನ್ನ ಹೆಸರು ದಾಖಲಾಗಿದೆ. ಸದರಿ ಮನೆ ಶಿವಾಜಿ ಪಾಂಡುರಂಗ ಲೋಹಾರ ಇತನಿಗೆ ನಾವು ಇಬ್ಬರು ಮಾರಾಟ ಮಾಡಿದ್ದೇವೆ. ವಿಪಿಸಿ ನಂ: 182 / 5 ಕ್ಕೆ ನಾನು ವರದಿ ನೀಡಿ ನನ್ನ ಹೆಸರು ದಾಖಲಿಸಿಕೊಂಡಿರುವದಿಲ್ಲ. ವಿಪಿಸಿ ನಂ : 182/5 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇತ್ತು ಅಂತಾ ಅನ್ನುವುದು ನಿಜ. ಸದರ ಮನೆ ಪೈಕಿ ಸ್ವಲ್ಪ ಭಾಗ ದತ್ತು ಗಾವಡೆ ಇತನು ಭರ್ಮಾ ಕೋಖಿತಕರ ಇತನಿಗೆ ಮಾರಾಟ ಮಾಡಿದ್ದನೆ ಅಂತಾ ಅಂದರೆ ಇಬ್ಬರು ಸೇರಿ ಮಾರಾಟ ಮಾಡಿದ್ದೇವೆ. ಇಬ್ಬರು ಕೂಡಿ ಖರೀದಿ ಕೊಟ್ಟದ್ದೇವೆ ಅಂತಾ ಹೇಳಲು ನನ್ನ ಬಳಿ ದಾಖಲೆ ಇರುವದಿಲ್ಲ. ವಿಪಿಸಿ ನಂ : 183/ ಅ , ದತ್ತು ಗಾವಡೆ ಇತನ ಹೆಸರಿನಲ್ಲಿ ಇದೆ. ಸದರಿ ಮನೆಗೆ ನನ್ನ ಹೆಸರು ದಾಖಲಿಸಲು ನಾನು ವರದಿ ಕೊಟ್ಟರುವದಿಲ್ಲ. ಕಳೆದ 50 ವರ್ಷಗಳಿಂದ ವಿಪಿಸಿ ನಂ : 66 ಮತ್ತು 66/ ಅ ಅಸ್ತಿತ್ವದಲ್ಲಿದೆ ಅಂತಾ ಅನ್ನುವುದು ನಿಜ. 66 ಅ , ಕ್ಕೆ ದತ್ತು ಗಾವಡೆ ಮತ್ತು 66 ಬ, ಗೆ ಮಾರುತಿ ಭಾಹುಕಣ್ಣಾ ಖೇಳಪ್ಪಾಗಾವಡೆ ಇತನ ಹೆಸರು ದಾಖಲಾಗಿದೆ. ಸದರಿ ಮನೆಗಳಿಗೆ ನನ್ನ ಹೆಸರು ದಾಖಲಿಸಲು ನಾನು ವರದಿ ಕೊಟ್ಟದ್ದೇನು. 66 ಅ ಮನೆಗೆ ದತ್ತು ಗಾವಡೆ ಇತನ ಹೆಸರು ಕಡಿಮೆ ಮಾಡಿ 1 ನೇ ಪ್ರತಿವಾದಿ 5 – 6 ವರ್ಷಗಳ ಹಿಂದೆ ತನ್ನ ಹೆಸರು ಹಚ್ಚಿಕೊಂಡಿದ್ದಾನೆ ಅದಕ್ಕೆ ನಾನು ತಕರಾರು ಮಾಡಿರುವದಿಲ್ಲ. ದತ್ತು ಗಾವಡೆ ಘಟಪ್ರಭಾ ಅರ್ಬನ ಬ್ಯಾಂಕಿನಿಂದ ಸಾಲ ಪಡೆದುಕೊಂಡಿದ್ದನು ಎಂಬುದು ನನಗೆ ಗೊತ್ತಿರುವದಿಲ್ಲ.

ಮುಂದುವರೆದ ಪಾಟೀ ಸವಾಲು ವಕೀಲರ ವಿನಂತಿ ಮೇರೆಗೆ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ